WITHDRAWAL OF GRANTS ALLOTED AS RELIEF MEASURES TO HASSAN DISTRICT

† ಶ್ರೀ ಕೆ.ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದಕ್ಕೆ ಇನ್ನೂ ಸರ್ಕಾರದಿಂದ ಉತ್ತರವೇ ಬಂದಿಲ್ಲ. ಕಳೆದ ವರ್ಷ ಹಾಸನ ಜಿಲ್ಲೆಯಲ್ಲಿ ಮಳೆಯಾಗಲಿಲ್ಲ. ಅದೇ ರೀತಿಯಾಗಿ ಹಳೆಯ ಮೈಸೂರಿನ ಅನೇಕ ಭಾಗಗಳಲ್ಲಿ ಮಳೆಯಾಗಿಲ್ಲ. ರಿಲೀಫ್ ಗ್ರಾಂಟನ್ನು ಏನೋ ಸರ್ಕಾರದವರು ಕೊಟ್ಟರು ಆದರೆ ಹಾಸನ ಜಿಲ್ಲೆಗೆ ಕೊಟ್ಟಿಂಥ ೧೦ಲಕ್ಷ ರೂಪಾಯಿಗಳಲ್ಲಿ ಬೇಕ್ಷ್ಣು ಮೊಬಲಗನ್ನು ಸರ್ಕಾರದವರು ವಿತ್‌ಡ್ರಾ ಮಾಡಿ ಕೊಂಡಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಮೂರು ತಿಂಗಳಲ್ಲಿಯೇ ಮಳೆಯಾಗುತ್ತಿತ್ತು. ೩-೪ ಪಟಗಳಷ್ಟು ಮಳೆ ಬಂದು ಬೆಳೆ ಚೆನ್ನಾಗಿ ಬೆಳೆದು ರಾಶಿ ಮಳೆ ಯಾಗುತ್ತಿತ್ತು. ಆದರೆ ಆ ಸಾರಿ ಮಳೆ ಬೀಳಲಿಲ್ಲ. ನಾನು ನನ್ನ ಕ್ಷೇತ್ರಕ್ಕೆ ಹೋದಾಗ ಜನ ಅಲ್ಲಲ್ಲಿ ೩-೪ ಸೌಲೆಗಳಷ್ಟು ದೂರದಿಂದ ನೀರು ಹೊತ್ತು ತಂದು ಬದುಕುತ್ತಿದ್ದರು. ಅಲ್ಲಿನ ಪರಿಸ್ಥಿತಿ ಇಷ್ಟೊಂದು ಭೀಕರವಾಗಿದೆ. ಇಂಥಾ ವ್ಯಾಲ್ಲಿ ಸರ್ಕಾರ ಕೊಟ್ಟಿಂಥ ಹಣವನ್ನು ವಾಪಸ್ಸು ತೆಗೆದು ಕೊಂಡಿದೆ. ನನ್ನ ಪ್ರಶ್ನೆ ರಿಲೀಫ್ ವರ್ಕ್ಸ್ ಐಟಂನಲ್ಲಿ ಹೇಳಿರುವ ಪ್ರಕಾರ ಯಾವುದೆಲ್ಲ ನೀರಿನ ಬಾವಿಗಳನ್ನು ತೆಗೆದಿದ್ದಾರೆ. ನೀರು ಬಂದಿದೆ. ಆದರೆ ಬಾವಿಗಳನ್ನು ಇನ್ನೂ ಕಂಪ್ಲೀಟ್ ಮಾಡಲಿಲ್ಲ. ಇವಕ್ಕೆ ಹೆಚ್ಚಿಗೆ ದುಡ್ಡು ಬೇಕಾಗುತ್ತದೆ. ಸಾಮಾನ್ಯವಾಗಿ ಒಂದೊಂದು ಬಾವಿಗೆ ೫-೬ ಸಾವಿರ ರೂಪಾಯಿಗಳಷ್ಟು ಖರ್ಚಾಗುತ್ತದೆ. ಆದಕ್ಕೆ ಬೇಕಾಂಥ ಮೊಬಲಗನ್ನು ಖರ್ಚುಮಾಡದೆ. ಅದನ್ನೂ ಕೂಡ ಸರ್ಕಾರದವರು ವಾಪಸ್ಸು ತೆಗೆದುಕೊಂಡಿದ್ದಾರೆ. ಇನ್ನು ಮಳೆ ಬಾರದೇ ಇರುವ ಕಡೆಗಳಲ್ಲಿ ಕೂಲಿಯಿಂದ ಜೀವನ ಮಾಡುವ ಜನರು ಉದ್ಯೋಗ ವಿಲ್ಲದೆ ಬಹಳವಾಗಿ ತೊಂದರೆ ಪಡುತ್ತಿದ್ದಾರೆ. ಈ ವರ್ಷ ಮಳೆ ಸಕಾಲಕ್ಕೆ ಬರದೆ ವ್ಯವಸಾಯಕ್ಕೆ ಉತ್ತಮ ಪರಿಸ್ಥಿತಿ ಇಲ್ಲವಾಗಿದೆ. ಕೂಲಿ ಕೆಲಸ ಇಲ್ಲವೇ ಇಲ್ಲ. ಮಳೆ ಬರಲೇ ಇಲ್ಲ. ಇದರಿಂದ ರೈತರು ವ್ಯವಸಾಯಕ್ಕೆ ಕೈಹಾಕಲಿಲ್ಲ. ಕೂಲಿಗಾರ ಕೆಲಸ ಸಿಗುತ್ತಾ ಇಲ್ಲ. ಅವರು ಉಪವಾಸ ಬಿದ್ದು ಸಾಯುತ್ತಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಅನೇಕ ಕಡೆಗಳಲ್ಲಿ ಏನೂ ಬೆಳೆಯಾಗದೆ ಜನರು ಸೊಪ್ಪು ತಿಂದು ಜೀವನಮಾಡುತ್ತಿದ್ದಾರೆ. ಜನ ಕಂಗೆಟ್ಟಿದ್ದಾರೆ. ಭೂಮಿ ಬೆಂಗಾಡಾಗಿದೆ. ಇಂತಹ ಒಂದು ಪರಿಸ್ಥಿತಿ ಹಾಸನ ಜಿಲ್ಲೆಯಲ್ಲಿ ಇದೆ. ಸರ್ಕಾರದವರು ಕೊಟ್ಟಿಂಥ ಹಣವನ್ನು ಏಕೆ ವಾಪಸ್ಸು ತೆಗೆದುಕೊಂಡಿದ್ದಾರೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಚರ್ಚಿಸಬೇಕಾಗಿದೆ. ಹಳೆಯ ಮೈಸೂರಿನ ಕೆಲವು ಭಾಗಗಳಿಗೆ ಸಂಬಂಧಪಟ್ಟ ಹಾಗೆ ಲೋಕೋಪಯೋಗಿ ಶಾಖೆಗೆ ಸಂಬಂಧಪಟ್ಟ ಕೆಲವು ಕೆಲಸಗಳು ಅಂದರೆ ಸುಮಾರು ಒಂದು ಲಕ್ಷಕ್ಕೆ ಮೇಲ್ಪಟ್ಟಂತಹುಗಳು ಈಗಾಗಲೇ ಮಾನ್ಯ ಪಜಿವರ ಮುಂದೆ ಮಂಜೂರಾತಿಗೆ ಇವೆ. ಆದರೆ ಅವನ್ನು ಹಣಕಾಸಿನ ಇಲಾಖೆಯವರು ಬಜೆಟ್ಟಿನಲ್ಲಿ ಸೇರಿಸಿಲ್ಲ. ಆ ವರ್ಕ್ಸನ್ನು ಅವರ ಇಲಾಖೆಗೆ ವಾಪಸ್ಸು ತೆಗೆದುಕೊಳ್ಳುವುದಕ್ಕಾಗಿ ಕಳುಹಿಸಿದ್ದಾರೆ. ಹಳೆಯ ಮೈಸೂರಿನ ಕೆಲವು ಭಾಗದ ಕೆಲಸಗಳನ್ನು ತೆಗೆದುಕೊಳ್ಳಲು ಮಾನ್ಯ ಮುಂತ್ರಿಗಳಿಗೆ ಅಧಿಕಾರವಿದ್ದರೂ ಅದು ಈಗ ಅವರ

ಕೈಕಟ್ಟಿದೆ. ಅವರಿಗೆ ಅದು ಅವಕಾಶವಾಗಲಿಲ್ಲ. ಆ ಒಂದು ರಿಲೀಫ್‌ಗೆ ದುಡ್ಡು ಇಲ್ಲವೆಂದು ಈಗ ಹೇಳುತ್ತಾರೆ.

2-30 P.M.

ಹೀಗಾದರೆ, ಜನರೇನು ಬದುಕಬೇಕೋ, ಸಾಯಬೇಕೋ, ನೀವೇ ಹೇಳಿ. ಅವರನ್ನು ನೋಡಿದರೆ ಯಾರಿಗಾದರೂ ಸಂಕಟವಾಗದಿರದು ಕಣ್ಣೀರು ಬರುತ್ತೆ.....

ಉಪಾಧ್ಯಕ್ಷರು.—ಸಾಕು, ತಾವು ಹೇಳುತ್ತಿರುವದು ಸರ್ಕಾರಕ್ಕೆ ಗೊತ್ತಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಸದಸ್ಯರು ಬಹಳ ಸಂಕಟದಿಂದ ಹೇಳುತ್ತಿದ್ದಾರೆ.

Mr. DEPUTY SPEAKER.— The hon. members cannot as a matter of fact raise everything in the Zero hour. The House knows what limitations there are. Things which are very urgent and matters which are brought to the notice of the Government alone can be raised. Now the hon. member has raised this matter about finances being turned down etc. He could have referred the matter to the Government, and discussed these things with the Minister. That will be more effective. If he is simply provoked, I do not think he will get matters solved.

Sri H.M.CHANNABASAPPA.—Sir, I appreciate the anxiety of the Hon'ble Member on account of the difficulties that have been caused by lack of rain in Hassan District. Government will be too glad to appreciate the difficulties that are experienced by the people there and will do what is necessary to solve the problems provided Government gets prior notice of what he feels about it. Straightaway if the Hon. Member springs a surprise and says that people in Hassan district are facing difficulties, it would be very difficult for the Government straightaway to give a satisfactory answer or to take satisfactory action,—action which will satisfy the people and also set matters right. Therefore, I shall be grateful if the Hon. Member passes on all that he has said here to Government. I will have it examined and take action, such action as is necessary as expeditiously as is possible.